SA – 426

IV ಸೆಮಿಸ್ಟರ್ ಬಿ.ಎಸ್ಸಿ./ಬಿ.ಸಿ.ಎ. ಪರೀಕ್ಷೆ, ಏಪ್ರಿಲ್/ಮೇ 2015
(ರಿಪೀಟರ್ಸ್) (2010-11)
ಕನ್ನಡ ಭಾಷಾ ಪತ್ರಿಕೆ - IV
ಸಾಹಿತ್ಯ ಸಂವಾದ - ಭಾಗ - ೨

Time : 3 Hours Max. Marks : 90

I. ಅರ್ಥ ಮತ್ತು ಧ್ವನಿ ಬದಲಾಗದಂತೆ **ಮೂರು** ವಾಕ್ಯಗಳಿಗೆ ಬದಲಿ ವಾಕ್ಯ ರಚಿಸಿ : **(3×2=6)**

1) ಹುಲಿಗೆ ಒಂದು ಗುಂಡನ್ನು ಹೊಡೆದೆ.
2) ಅಭಿವೃದ್ಧಿಯನ್ನು ಧಾರಣಶಕ್ತಿಯ ಸಂವರ್ಧನೆಯೆಂದು ನಿರ್ವಚಿಸುತ್ತಾರೆ.
3) ಪಾಶ್ಚಾತ್ಯರ ಬಹುರಾಷ್ಟ್ರೀಯ ಕಂಪನಿಗಳನ್ನು ನಾವು ಸ್ವಾಗತಿಸುತ್ತಿದ್ದೇವೆ.
4) ಇದರಿಂದ ನಮ್ಮ ದೇಶದ ರಫ್ತು ವ್ಯಾಪಾರ ಹೆಚ್ಚಾಗುತ್ತದೆ.

II. ಅರ್ಥವತ್ತಾದ ಕ್ರಮದಲ್ಲಿ **ಮೂರು** ವಾಕ್ಯಗಳನ್ನು ಪುನಾರಚಿಸಿ : **(3×2=6)**

1) ಈಜುಗಾರನಾಗಿದ್ದೆ ಬಾಲ್ಯದಲ್ಲಿ ಒಳ್ಳೆ.
2) ಕೊಡಬೇಕು ಡಾಲರ್ ಮೂವತ್ತು.
3) ವರದಿಗಳನ್ನು ನೋಡಿಯೇ ಬೆಳೆದವರು ಬರುವ.
4) ತಲೆಯೆತ್ತಿ ನಿಂತಿದೆ ಹೆಸರಿನಲ್ಲಿ ಉದ್ಧಾರದ.

III. ಉಪಮೆ ಮತ್ತು ರೂಪಕಗಳನ್ನು ಬಳಸಿ **ಮೂರು** ಸ್ವಂತ ವಾಕ್ಯಗಳನ್ನು ರಚಿಸಿ : **(3×2=6)**

1) ಕರ್ಣನಂತೆ
2) ಕಮಲಾಕ್ಷಿ
3) ಪುರುಷಸಿಂಹ
4) ಇಂದುಮುಖಿಯಂತೆ.

IV. **ಮೂರು** ನುಡಿಗಟ್ಟುಗಳನ್ನು ಸ್ವಂತ ವಾಕ್ಯಗಳಲ್ಲಿ ಪ್ರಯೋಗಿಸಿ : **(3×2=6)**

1) ತಲೆಬಾಗು
2) ಪಂಗನಾಮ ಹಾಕು
3) ಟೋಪಿ ಹಾಕು
4) ಕಣ್ಣಾಕು.

ಪು.ತಿ.ನೋ.

V. ಎರಡು ಗಾದೆ ಮಾತುಗಳನ್ನು ವಿಸ್ತರಿಸಿ ಬರೆಯಿರಿ : **(2×3=6)**

1) ಮಾತು ಆಡಿದರೆ ಹೋಯಿತು ಮುತ್ತು ಒಡೆದರೆ ಹೋಯಿತು.

2) ಊರು ಹೋಗು ಅನ್ನುತ್ತೆ ಕಾಡು ಬಾ ಅನ್ನುತ್ತೆ.

3) ಗಂಡ-ಹೆಂಡಿರ ಜಗಳ ಉಂಡು ಮಲಗುವ ತನಕ.

4) ಪಾಲಿಗೆ ಬಂದದ್ದು ಪಂಚಾಮೃತ.

VI. ನಾಲ್ಕು ಪ್ರಶ್ನೆಗಳಿಗೆ ತಾರ್ಕಿಕ ಆಲೋಚನೆಯ ಹಿನ್ನೆಲೆಯಲ್ಲಿ ಉತ್ತರಿಸಿ : **(4×5=20)**

1) ಪ್ರಾದೇಶಿಕ ಹಾಗೂ ಅಂತರರಾಷ್ಟ್ರೀಯ ಕ್ರೀಡೆಗಳ ಲಕ್ಷಣಗಳೇನು ?

2) ನವಜಾತ ಅಭಿವೃದ್ಧಿ ಮೀಮಾಂಸೆಯನ್ನು ತಿಳಿಸಿ.

3) ಸೌಂದರ್ಯವನ್ನು ನಿಷ್ಕರ್ಷಿಸಲು ಬಣ್ಣ ಒಂದು ಮಾನದಂಡವೇ ತಿಳಿಸಿ.

4) ''ತಮಿಳುನಾಡಿನ ಹೆಣ್ಣುಗಳೆಲ್ಲಾ ಮೀನಾಕ್ಷಿಯರೆ'' ಎಂದು ಹೇಳಲು ಕಾರಣವೇನು ?

5) ಮಹಾಡ್ ಸಮಾವೇಶದ ಚಾರಿತ್ರಿಕ ಮಹತ್ವವನ್ನು ಕುರಿತು ಬರೆಯಿರಿ.

6) ಆಹಾರ ಧಾನ್ಯಗಳ ಅಸಮಾನ ವಿತರಣೆಯೇ ಬರಗಾಲಕ್ಕೆ ಕಾರಣ – ಹೇಗೆ ?

VII. ಎರಡು ಪ್ರಶ್ನೆಗಳಿಗೆ ವಿವರಣಾತ್ಮಕ ಉತ್ತರ ಬರೆಯಿರಿ : **(2×10=20)**

1) ಕ್ರೀಡಾ ಸಾಧನೆಯ ಮೇಲೆ ಪರಿಣಾಮ ಬೀರುವ ಅಂಶಗಳನ್ನು ಪಠ್ಯದ ಹಿನ್ನೆಲೆಯಲ್ಲಿ ವಿವರಿಸಿ.

2) ಮಾನವ ಸಂಬಂಧಗಳ ಹಿನ್ನೆಲೆಯಲ್ಲಿ ಹಣದ ಮಹತ್ವವನ್ನು ಕುರಿತು ಬರೆಯಿರಿ.

3) ಸೌಂದರ್ಯ ಮತ್ತು ಮೈಬಣ್ಣ ಲೇಖನದ ಆಶಯವನ್ನು ವಿವರಿಸಿ.

VIII. ಎರಡು ಪ್ರಶ್ನೆಗಳಿಗೆ ವಿಮರ್ಶಾತ್ಮಕ ಉತ್ತರ ಬರೆಯಿರಿ : **(2×10=20)**

1) ಗಾಯಗೊಂಡ ಎರಡು ಮೃಗಗಳ ಅಸ್ತಿತ್ವದ ಹೋರಾಟವನ್ನು ಲೇಖನದ ಹಿನ್ನೆಲೆಯಲ್ಲಿ ವಿವರಿಸಿ.

2) ನವವಸಾಹತುಶಾಹಿಯ ಆಕರ್ಷಣೆ ಮತ್ತು ಅಪಾಯದ ನೆಲೆಗಳನ್ನು ವಿಶ್ಲೇಷಿಸಿ.

3) ಮಹಾಡ್ ಸಮಾವೇಶದಲ್ಲಿ ಅಂಬೇಡ್ಕರ್‌ರವರು ನೀಡಿದ ಚಿರಕಾಲದ ಸಂದೇಶಗಳನ್ನು ವಿವರಿಸಿ.

---